International Journal for Multidisciplinary Research (IJFMR)

E-ISSN: 2582-2160 ● Website: www.ijfmr.com ● Email: editor@ijfmr.com

# ಡಾ. ಮುಲ್ಲಾ ಅಕಬರ ಅಲಿಯವರ ಸಾಹಿತ್ಯದ ಅವಲೋಕನ

**ಡಾ. ಎಂ. ಆರ್. ದೊಡಮನಿ,**
**ಕನ್ನಡ ಸಹ ಪ್ರಾಧ್ಯಾಪಕರು**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು**
**& ಸ್ನಾತಕೋತ್ತರ ಪದವಿ ಕೇಂದ್ರ**
**ರಾಮದುರ್ಗ–೫೯೧೧೨೩.**

"ಕವಿ ಡಾ. ಎಂ. ಅಲಿಯವರು ಕನ್ನಡ ಸಾಹಿತ್ಯದ ಅಜಾತಶತ್ರುಗಳು ಮಾತ್ರವಲ್ಲದೇ, ಬದುಕು ಬರಹಗಳ ನಡುವೆ ಸಜ್ಜನಿಕೆ–ಸೌಜನ್ಯದ ಸಾಮರಸ್ಯ ಸಾಧಿಸಿಕೊಂಡು ಬಂದ ಹಿರಿಯ ತಲೆಮಾರಿನ ಸಾಹಿತಿಗಳು."[೧] ಸಾಹಿ ಇಂತಹ ಮೇರು ಸಾಹಿತಿಗಳು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಉಲ್ಲಾಗಡ್ಡಿ ಎಂಬ ಸಣ್ಣ ಗ್ರಾಮದಲ್ಲಿ ಮಾರ್ಚ್ ೩, ೧೯೨೫ರಲ್ಲಿ ಜನಿಸಿದರು. ಇವರ ತಾಯಿ ಅಮೀರಬಿ ಮತ್ತು ತಂದೆ ಅಪ್ಪಾಸಾಹೇಬ. ಅಲಿಯವರ ಪ್ರಾಥಮಿಕ ಶಿಕ್ಷಣವನ್ನು ಉರ್ದುವಿನಲ್ಲಿ ಪೂರೈಸಿದರು. ಮುಂದೆ ಬೆಳಗಾವಿಯಲ್ಲಿ ಬಿ.ಎ. ಮುಗಿಸಿ, ನಂತರ ಪುಣೆ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡರು. ಅಕಬರ ಅಲಿಯವರು ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿಯನ್ನು ಕೂಡಾ ಪಡೆದುಕೊಂಡರು.

ನಂತರ ಕನ್ನಡ ಪ್ರಾಧ್ಯಾಪಕ ವೃತ್ತಿಯಿಂದ ಜೀವನವನ್ನು ಆರಂಭಿಸಿ, ಕನ್ನಡ ಸಾಹಿತ್ಯದ ಕಾವ್ಯ, ಕಾದಂಬರಿ, ವಿಮರ್ಶೆ, ಪ್ರಬಂಧ, ಚುಟುಕು, ಸಂಶೋಧನಾತ್ಮಕ ಬರಹಗಳಿಂದ ಪ್ರಸಿದ್ಧರಾಗಿದ್ದಾರೆ. ಅಲಿಯವರು ತಮ್ಮ ತೊಂಭತ್ತೆರಡನೆಯ ವಯಸ್ಸಿನಲ್ಲಿ ೨೧ ಫೆಬ್ರುವರಿ, ೨೦೧೬ರಲ್ಲಿ ನಮ್ಮನ್ನು ಅಗಲಿದ್ದಾರೆ. ಆದರೆ ಅಲಿಯವರು ಸಾಹಿತ್ಯ ಕ್ಷೇತ್ರದಿಂದ ನಮ್ಮಲ್ಲೇ ಇದ್ದಾರೆ. "ಕವಿ ಅಲಿಯವರ ಕಾವ್ಯ ಕೃಷಿ ಕನ್ನಡ ಜಾಯಮಾನದ ಜಾಡಿನಲ್ಲಿಯೇ ಹೆಜ್ಜೆ ಹಾಕುತ್ತ ಬಂದಿದ್ದು, ಅದಕ್ಕೆ ಧರ್ಮನಿರಪೇಕ್ಷ ಭಾವವೇ ಮೂಲ ಪ್ರೇರಕ ಶಕ್ತಿ." ಹೀಗಾಗಿ ಅಲಿಯವರ ಕಾವ್ಯ, ಕೃತಿಗಳಲ್ಲಿ ಮೂಡಿಬಂದಿರುವ ಸಾಹಿತ್ಯವನ್ನು ಈ ಕೆಳಗಿನಂತೆ ವಿವೇಚಿಸಿದ್ದಾರೆ.

## ೧. ಅಕಬರ ಅಲಿಯವರ ಕವನ ಸಂಕಲನಗಳು

**೧. ವಿಷಸಿಂಧು:** ಕವಿ ಅಕಬರ ಅಲಿಯವರ ಮೊದಲ ಕವನ ಸಂಕಲನ 'ವಿಷಸಿಂಧು'. ಈ ಕೃತಿಯು ೧೯೫೧ರಲ್ಲಿ ಪ್ರಕಟಗೊಂಡಿದೆ. 'ವಿಷಸಿಂಧು' ಕವನಸಂಕಲನದಲ್ಲಿ ಒಟ್ಟು ಮೂವತ್ತೆಂಟು ಅಷ್ಟಷಟ್ಪದಿಗಳನ್ನು ಒಳಗೊಂಡಿದೆ. ಇಲ್ಲಿಯ ಎಲ್ಲ ಕವಿತೆಗಳಲ್ಲಿ ಅಂದಿನ ಸ್ವಾತಂತ್ರೋತ್ತರದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಪ್ರತಿಬಿಂಬವಾಗಿವೆ.

**೨. ನವಚೇತನ:** ಈ ಕವನ ಸಂಕಲನವು ೧೯೬೧ರಲ್ಲಿ ಪ್ರಕಟಗೊಂಡಿದೆ. ಇಲ್ಲಿ ಜನ ಸಾಮಾನ್ಯರು ಜೀವನದಲ್ಲಿ ನೋವು–ನಲಿವುಗಳನ್ನು ಮೂಕರಾಗಿ ಅನುಭವಿಸುತ್ತಾರೆ. ಇದನ್ನು ಕಂಡ ಕವಿ ತನ್ನ ಅನುಭವಗಳಿಗೆ ದೈವದತ್ತ

[೧] ಡಾ. ಅಕಬರ ಅಲಿ ಅವರ ಸಮಗ್ರ ಸಾಹಿತ್ಯ, ಸಂ. ದಸ್ತಗೀರ ಹುಲ್ಯಾಳ, ಪು.ಸಂ.೩೫೨

ಪ್ರತಿಭೆಯ ಮೂಲಕ ಕಾವ್ಯರೂಪಕ್ಕೆ ತಂದು ಅದನ್ನು ವ್ಯಕ್ತಪಡಿಸುತ್ತಾನೆ. ಇಂತಹ ಅನುಭವಗಳ ಗುಚ್ಛವೇ 'ನವಚೇತನ' ಕವನ ಸಂಕಲನದ ವಸ್ತುಗಳಾಗಿವೆ.

೩. **ಸುಮನ ಸೌರಭ:** ಈ ಸಂಕಲನವು ೧೯೬೫ರಲ್ಲಿ ಪ್ರಕಟಗೊಂಡಿದೆ. ಈ ಸಂಕಲನವು ಅತ್ಯುತ್ತಮ, ಉತ್ತಮ, ಸಾಧಾರಣ ಕವಿತೆಗಳಿಂದ ಕೂಡಿದರೂ, ಕೂಡಾ ಕವಿಯ ಪ್ರತಿಭೆಯು ಕೆಲವೊಂದು ಕವಿತೆಗಲ್ಲಿ ಸಹಜತೆ, ಭಾವ ನಿರ್ಭತೆಗಳಿಂದ ಕೂಡಿಕೊಂಡಿವೆ. ಅಲ್ಲದೇ ರಾಷ್ಟ್ರೀಯ ಐಕ್ಯತೆಯ ಮನೋಭಾವನೆಗಳನ್ನು ಪ್ರತಿಮೆಗಳ ಮೂಲಕ ಈ ವ್ಯಕ್ತಗೊಂಡಿವೆ.

೪. **ಗಂಧಕೇಶ್ವರ:** ೧೯೭೭ರಲ್ಲಿ ಪ್ರಕಟಗೊಂಡ 'ಗಂಧಕೇಶ್ವರ' ಅಲಿಯವರ ಮತ್ತೊಂದು ಕವನ ಸಂಕಲನವಾಗಿದೆ. ಇಲ್ಲಿ ಆಧುನಿಕತೆ ನವ್ಯ ಕಾವ್ಯದ ಜೀವಾಳವಾಗಿಸಿಕೊಂಡಿದ್ದಾರೆ. ಅಲಿಯವರು ಸಾಮಾಜಿಕ ಮತ್ತು ವೈಯಕ್ತಿಕ ಅಂಶಗಳನ್ನು ಕೂಡಿಸಿಕೊಂಡು ಕಾವ್ಯವನ್ನು ಇಲ್ಲಿ ರಚಿಸಿದ್ದಾರೆ.  ಹಾಗೇ ನವ್ಯ ಕಾವ್ಯದಲ್ಲಿ ಮನುಷ್ಯ ಮತ್ತು ಸಮಾಜದ ನಡುವಿನ ಸಂಬಂಧಗಳ ಬಗ್ಗೆ ಚಾರಿತ್ರಿಕ ಹಾಗೂ ಗುಣಾತ್ಮಕವಾದ ಒಂದು ಬೆಳವಣಿಗೆಯನ್ನು ಈ ಕೃತಿ ತಂದುಕೊಂಡುತ್ತದೆ.

೫. **ತಮಸಾ ನದಿ ಎಡಬಲದಿ :** ಕವಿ ಅಲಿ ಅವರ 'ತಮಸಾ ನದಿ ಎಡಬಲದಿ' ಕವನ ಸಂಕಲನವು 'ವಿಷಸಿಂಧು', 'ನವಚೇತನ', 'ಸಮನ ಸೌರಭ' ಹಾಗೂ 'ಗಂಧಕೇಶ್ವರ' ಕವನ ಸಂಕಲನಗಳ ಆಯ್ದ ಕವಿತೆಗಳ ಸಂಗ್ರಹವಾಗಿದೆ.

೬. **ಕಸಿ ಗುಲಾಬಿಯ ಕಥನ:** 'ಕಸಿ ಗುಲಾಬಿಯ ಕಥನ' ಕವನ ಸಂಕಲನವು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ತೊಳಲಾಟ, ಅಳಲು–ಆಂತಕ, ಸಿಹಿ–ಕಹಿ, ಧರ್ಮ–ಸಂಸ್ಕೃತಿಯ ಅನಾವರಣದ ಕೃತಿಯಾಗಿದೆ. ಅಲ್ಲದೇ ಮುಸ್ಲಿಂ ಧರ್ಮೀಯರ ಸಂವೇದನೆಯನ್ನೊಳಗೊಂಡಿದೆ.

೭. **ಬೆಳಕಿನ ಆರಾಧನೆ :** ಹೊಸಗನ್ನಡದ ಎಲ್ಲ ಬಗೆಯ ವಿಶೇಷಗಳನ್ನು ಒಳಗೊಂಡ 'ಬೆಳಕಿನ ಆರಾಧನೆ' ಕವನ ಸಂಕಲನವು ೨೦೦೫ರಲ್ಲಿ ಮುದ್ರಣ ಕಂಡಿದೆ. ಇಲ್ಲಿಯ ಕವಿತೆಗಳು ಸಮಾಜದ ಆಗುಹೋಗುಗಳ ಬಗ್ಗೆ ಬೇರೆ ಬೇರೆ ವರ್ಗದ ವ್ಯಕ್ತಿಗಳ ಸ್ವಭಾವದ ಚಿತ್ರಣಗಳನ್ನು ವಿಶೇಷವಾಗಿ ಅಲಿಯವರು ವ್ಯಕ್ತಪಡಿಸಿದ್ದಾರೆ.

೮. **ಅನ್ನ–ಅರ್ಥಾರ್ಥ ಎಂ.ಟಿ. ಚುಟುಕುಗಳು :** ಕನ್ನಡದ ಚುಟುಕು ಸಾಹಿತ್ಯವು ಇಂಗ್ಲೀಷಿನ ಭಾವಗೀತೆದ ಪ್ರಭಾವ ಪ್ರೇರಣೆಗಳ ನಡುವೆಯೂ ಅದು ತನ್ನದೆ ಆದ ಪರಂಪರೆಯನ್ನು ಹುಟ್ಟುಹಾಕಿದೆ. ಅಲಿಯವರು ಅಂದಿನ ಸಾಮಾಜಿಕ, ರಾಜಕೀಯ ಮತ್ತು ವೈಯಕ್ತಿಕ ಜೀವನದ ಆಯಾಮಗಳನ್ನು ಇಟ್ಟುಕೊಂಡು ಇಲ್ಲಿ ಚುಟುಕುಗಳನ್ನು ರಚಿಸಿಕೊಟ್ಟಿದ್ದಾರೆ.

೯. **ಅಕಬರ ಅಲಿ ಚುಟುಕುಗಳು:**  ಸಾಹಿತ್ಯ ಸೃಷ್ಟಿಯಲ್ಲಿ ಹೊಸತನವನ್ನು ತೆರದ ಮನಸ್ಸಿನಿಂದ ಸ್ವೀಕರಿಸುವ ಮನೋಧರ್ಮ ರೂಢಿಸಿಕೊಂಡ ಕವಿ ಅಕಬರ ಅಲಿಯವರು ಯಾವುದೇ ಒಂದು ಪಂಥ–ಪಂಗಡಕ್ಕೆ ಶಾಶ್ವತವಾಗಿ ಅಂಟಿಕೊಂವರಲ್ಲ. ಹೀಗಾಗಿ ಅಕಬರ ಅಲಿಯವರ ಈ 'ಚುಟುಕು ಸಂಗ್ರಹ'ವು ಅಪ್ಪಟ ದೇಶಿಯ ಚೌಪದಿ ಛಂದಸ್ಸನ್ನು ಹೊಂದಿದೆ. ಇಲ್ಲಿಯ ಚುಟುಕುಗಳು ಜನಜೀವನದ ಪ್ರತಿಬಿಂಬಗಳಾಗಿದ್ದು, ಅವು ನಮ್ಮ ಜೀವನಕ್ಕೆ ಹಿಡಿದ ಕನ್ನಡಿಯಾಗಿವೆ.

## ೨. ಅಕಬರ ಅಲಿಯವರ ಕಾದಂಬರಿಗಳು

**೧. ನೀರಿಕ್ಷೆಯಲ್ಲಿ:** ಕಾವ್ಯ ಮತ್ತು ಚುಟುಕುಗಳಲ್ಲದೇ ಅಲಿಯವರು ಕಾದಂಬರಿಯನ್ನು ಕೂಡಾ ರಚಿಸಿದ್ದಾರೆ. ಅಲಿಯವರ ಒಂದೇ ಒಂದು ಕಾದಂಬರಿ 'ನಿರೀಕ್ಷೆಯಲ್ಲಿ' ೧೯೭೨ರಲ್ಲಿ ಮುದ್ರಣಗೊಂಡಿದೆ. ಸಾಮಾಜಿಕ ವಾಸ್ತವಾದಿ ಸಾಹಿತ್ಯದ ಪರಂಪರೆಯನ್ನು ಬಿತ್ತಿ ಬೆಳಸಿದ ಹಿರಿಯ ತಲೆಮಾರಿನ ಸಾಹಿತಿಗಳಂತೆ ಈ ಪರಂಪರೆಯನ್ನು ಸಮರ್ಥ ಮುನ್ನಡೆಸಿಕೊಂಡು ಹೊರಟರಲ್ಲಿ ಅಕಬರ ಅಲಿಯವರು ಒಬ್ಬರು. ಅವರು ರಚಿಸಿದ ಏಕೈಕ ಕಾದಂಬರಿ 'ನಿರೀಕ್ಷೆಯಲ್ಲಿ' ಕ್ರಾಂತಿಕಾರಕ ಕೃತಿ. ಇದು ಧರ್ಮದ ಹೆಸರಿನಲ್ಲಿ ಸಾಮಾಜಿಕ ಕಟ್ಟಳೆ–ನಿಯಮಗಳನ್ನು ರೂಪಿಸುವ, ಸ್ತ್ರೀಯರ ಹಕ್ಕುಗಳನ್ನು ಮೊಟಕುಗೊಳಿಸುವ ಮೂಲಭೂತವಾದಿಗಳ ಹೃದಯದ ಕಣ್ಣು ತೆರೆಸಿದ ಅತ್ಯದ್ಬುತ ಕೃತಿಯಾಗಿದೆ.

## ೩. ಅಕಬರ ಅಲಿಯವರ ಸಣ್ಣಕಥಾ ಸಂಕಲನ

**೧. ವಂಚನೆಗೊಳಗಾದ ಅಂತಃಕರಣ:** ಕವಿಯಾದ ಅಲಿಯವರು ಕಾದಂಬರಿಗಳ ಉಪ ಕಥೆಗಳಂತಿರುವ ಸಣ್ಣಕಥೆ ಪ್ರಕಾರಗಳಲ್ಲಿ 'ವಂಚನೆಗೊಳಗಾದ ಅಂತಃಕರಣ' ಎಂಬ ಬಿಡಿ ಕಥೆಯನ್ನು ರಚಿಸಿದ್ದಾರೆ. ಪ್ರಸ್ತುತ ಈ ಕಥೆಯಲ್ಲಿ ಒಂದೆಡೆ ಮನುಷ್ಯನ ಅಂತರಂಗದ ತುಮುಲುಗಳನ್ನು ಮನದಲ್ಲಿ ಬಿಚ್ಚಿ ಇಡುತ್ತದೆ. ಮತ್ತೊಂದು ಕಡೆ ಸತ್ಯವನ್ನು ಅರಿಯದ ಮನಸ್ಸುಗಳು ಭ್ರಮೆಯಿಂದ ತೊಳಲಾಡಿ, ಆತ್ಮ ವಂಚನೆಯನ್ನು ಮಾಡಿಕೊಳ್ಳುವ ಅಂತ:ಕರಣದ ಅನುಭೂತಿಯನ್ನು ಈ ಕಥೆಯಲ್ಲಿ ಅಲಿಯವರು ಅನಾವರಣಗೊಳಿಸಿದ್ದಾರೆ. ಹೀಗಾಗಿ ಈ ಒಂದು ಕಥೆಯಿಂದಲೇ ಅಲಿಯವರು ಉತ್ತಮ ಕಥೆಗಾರರು ಎಂಬುದು ಸಾಬೀತುಪಡಿಸಿಕೊಂಡಿದ್ದಾರೆ.

## ೪. ಅಕಬರ ಅಲಿಯವರ ಪ್ರಬಂಧ

**೧. ಪ್ರಬಂಧ ಪರಿಚಯ:** ಈ ಪ್ರಬಂಧವು ಹಲವು ಗುಣವಿಶೇಷತೆಗಳ ಮೂಲಕ ಚಿರಕಾಲ ಉಳಿಯಬಲ್ಲ ಪ್ರಬಂಧ ರಚನೆಯ ಹಿನ್ನೆಲೆಯಲ್ಲಿ ವಾಸ್ತವ ಸತ್ಯದ ಮೇಲೆ ಬೆಳಕು ಚೆಲ್ಲುವ ಪ್ರಮಾಣಿಕ ಪ್ರಯತ್ನವನ್ನು ಕೃತಿಯು ಮಾಡಿದೆ. ವಿದ್ಯಾರ್ಥಿ ತರುಣರಲ್ಲಿ ಸಾಹಿತ್ಯ ದೃಷ್ಟಿ–ಸೃಷ್ಟಿಯ ಅಭಿರುಚಿ–ಅಭಿಲಾಷೆಗಳು ಮೈದಾಳುವ ರೀತಿಯಲ್ಲಿ ತಯಾರಿಸಲ್ಪಟ್ಟಿದ್ದು ನಿಜಕ್ಕೂ ಸ್ವಾಗತರ್ಹವಾಗಿದೆ.

## ೫. ಅಕಬರ ಅಲಿಯವರ ವಿಮರ್ಶೆ

**೧. ಸಾಹಿತ್ಯ ವಿವೇಚನೆ:** ಕನ್ನಡದ ಮೊದಲ ಸೃಜನಶೀಲ ಸಾಹಿತ್ಯ ಪ್ರಕಾರಗಳ ಪ್ರಕ್ರಿಯೆಗಳಲ್ಲಾದ ಬದಲಾವಣೆಗಳ ಮೇಲೆ ವಿಮರ್ಶೆ, ಧೋರಣೆ, ನೆಲ ಮತ್ತು ನಿಲುವುಗಳು ಸಿದ್ಧಗೊಂಡಿವೆಂಬ ವಿಚಾರಗಳನ್ನು ಅಲಿಯವರು ಈ ಕೃತಿಯಲ್ಲಿ ಗ್ರಹಿಕೆಗಳನ್ನು ಕೊಡಮಾಡಿದ್ದಾರೆ.

**೨. ಕನ್ನಡ ಕಾವ್ಯ ಅಧ್ಯಯನ:** ಕನ್ನಡ ಕಾವ್ಯದಲ್ಲಿ ಕಂಡುಬರುವ ಹೊಸ ಪ್ರಜ್ಞೆ, ಹೊಸ ಸಂವೇದನೆಗಳನ್ನು ಒಳಗೊಂಡ ಆರು ಜನ ಅಗ್ರಗಣ್ಯ ಕವಿಗಳ ಕಾವ್ಯ ಕೃತಿಗಳ ವಿಮರ್ಶಾ ಲೇಖನಗಳ ಅಥವಾ ಪ್ರಬಂಧಗಳ ಸಂಗ್ರಹವಾದ 'ಕನ್ನಡ ಕಾವ್ಯ ಅಧ್ಯಯನ'ವು ಅಲಿಯವರ ಪ್ರಮುಖ ವಿಮರ್ಶಾ ಕೃತಿಯಾಗಿದೆ.

## ೫. ಅಕಬರ ಅಲಿಯವರ ಸಂಶೋಧನಾ ಮಹಾಪ್ರಬಂಧ

**೧. ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯತತ್ವ:** ಇದು ಅಕಬರ ಅಲಿಯವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧವಾಗಿದೆ. 'ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯತತ್ವ' ಕೃತಿಯಲ್ಲಿ ಒಬ್ಬ ಕವಿ ಮತ್ತೊಬ್ಬ ಕವಿಯನ್ನು ಕಂಡುಕೊಳ್ಳುವ ಅಧ್ಯಯನವಾಗಿದೆ. ಚುಟುಕು ರಚನೆಯಲ್ಲಿ ಪ್ರಾವೀಣ್ಯತೆ ಪಡೆದ ಅಕಬರ ಅಲಿ ಹಾಗೂ ಕವಿ ಸರ್ವಜ್ಞರ ನಡುವೆ ಸಮಾನ ಮನೋಧರ್ಮದ ಧರ್ಮನಿರಪೇಕ್ಷ ಗುಣಗಳು ಎದ್ದು ಕಾಣುವಂತೆ ಇಲ್ಲಿ ತೋರಿಸಿಕೊಟ್ಟಿದ್ದಾರೆ.

## ೫. ಅಕಬರ ಅಲಿಯವರ ಆಯ್ದ ಬರಹಗಳು

**೧. ಅಕಬರ ಅಲಿ ಅವರ ಆಯ್ದ ಬರಹಗಳು:** ಕನ್ನಡ ನಾಡಿನ ಹೆಸರಾಂತ ಕವಿ ಸಾಹಿತಗಳಾದ ಕುವೆಂಪು, ಬಸವರಾಜ ಕಟ್ಟಿಮನಿ, ಎಚ್ಚೆಸ್ಕೆ ಹಾಗೂ ದೇ.ಜ.ಗೌ. ಮೊದಲಾದವರು ಕೃತಿಗಳ ವಿಮರ್ಶಾ ಲೇಖನಗಳ ಸಂಗ್ರಹ 'ಅಕಬರ ಅಲಿ ಅವರ ಆಯ್ದ ಬರಹಗಳು' ಎಂಬ ವಿಮರ್ಶಾ ಕೃತಿ ೨೦೦೨ರಲ್ಲಿ ಪ್ರಕಟವಾಗಿದೆ. ಮಹಾಕವಿ ಕುವೆಂಪು ಅವರ ೭೨ನೆಯ ಜನ್ಮ ದಿನೋತ್ಸವದ 'ಕಾದಂಬರಿಗಳ ವಿಮರ್ಶೆ' ಎಂಬ ಪ್ರಬಂಧವು ವಿಮರ್ಶಾ ಸಂಕಲನದ ಮೊದಲ ಬರಹವಾಗಿದೆ.

## ೬. ಅಕಬರ ಅಲಿಯವರ ಪ್ರಶಸ್ತಿ-ಪುರಸ್ಕಾರಗಳು

ಅಕಬರ ಅಲಿಯವರ ಸಾಹಿತ್ಯ ಕೃಷಿಗೆ ಸಂದ ಬಹುಮಾನ, ಪುರಸ್ಕಾರಗಳು ಹತ್ತು ಹಲವು. ೧೯೬೭ರಲ್ಲಿ 'ಸುಮನ ಸೌರಭ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಗಂಧಕೇಶ್ವರ' ಕೃತಿಗೆ ಕೇಂದ್ರ ಶಿಕ್ಷಣ ಮತ್ತು ಸಮಾಜ ಮಂತ್ರಾಲಯದ ಗೌರವ, ೧೯೭೫ರಲ್ಲಿ ದೆಹಲಿಯಲ್ಲಿ ಗಣರಾಜ್ಯೋತ್ಸವ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕರ್ನಾಟಕ ಪ್ರತಿನಿಧಿಯಾಗಿ ಭಾಗಿಯಾದ ಗೌರವ, ೧೯೮೪ರಲ್ಲಿ 'ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯತತ್ವ' ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ, ೧೯೮೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಒಟ್ಟಿನಲ್ಲಿ "ಕವಿ ಅಲಿಯವರು ಕಾವ್ಯ ಸ್ವೋಪಜ್ಞತೆ, ವಿಡಂಬನೆ–ವಿದಗ್ಧತೆ, ಅಂತರಂಗದ ಅನ್ವೇಷಣೆ, ಬಾಳಿನ ಅರ್ಥದ ಶೋಧ, ಪರಕೀಯ–ಸ್ವಕೀಯ–ದ್ವಂದ್ವತೆ, ವಾಸ್ತವ–ಆದರ್ಶಗಳ ತಿಕ್ಕಾಟ, ಭಯ–ಆತಂಕ, ಸಹಾನುಭೂತಿಯ ಸಂತಾಪ, ಬದುಕಿನ ಪರಿಪೂರ್ಣತೆಯ ಅರಿವು, ಅದರ ತಾಯ್ತನ, ಪರಂಪರೆ ಪ್ರಜ್ಞೆ–ಸಮಷ್ಟಿ ಪರಿಕಲ್ಪನೆ, ಮಾತು–ಕೃತಿಗಳ ಸಾಮ್ಯತೆ, ಅನುಭವ ಅಭಿವ್ಯಕ್ತಿಗಳ ಅನನ್ಯತೆ ಈ ಮೊದಲಾದ ವೈವಿಧ್ಯಪೂರ್ಣಅನುಭೂತಿಗಳಿಂದ ಕೂಡಿರುವಂಥದು."[೨] ಅಲಿಯವರು ಇದನ್ನು ಕನ್ನಡ ಸಾಹಿತ್ಯಲೋಕಕ್ಕೆ ಕೊಟ್ಟ ಅಪಾರ ಕೊಡುಗೆಯಾಗಿದೆ.

**ಪರಾಮರ್ಶನ ಗ್ರಂಥಗಳು**

೧] ಡಾ. ಅಕಬರ ಅಲಿ ಅವರ ಸಮಗ್ರ ಸಾಹಿತ್ಯ, ಸಂಪಾದಕರು: ದಸ್ತಗೀರ ಹುಲ್ಯಾಳ

೨] ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ

೩] ಕನ್ನಡ ಸಾಹಿತ್ಯ ಕೋಶ: ಸಂ: ರಾಜಪ್ಪ ದಳವಾಯಿ: ದಳವಾಯಿ ಪ್ರಕಾಶನ ಬೆಂಗಳೂರು–೫೬

೪] ಸಮಗ್ರ ಸಾಹಿತ್ಯ ಚರಿತ್ರೆ ಜಿ.ಎಸ್.ಶಿವರುದ್ರಪ್ಪ

೫] ದಶಕದ ಕನ್ನಡ ಸಾಹಿತ್ಯ, ಸಂ–ಎಫ್.ಟಿ ಹಳ್ಳಕೇರಿ

[೨] ಡಾ. ಅಕಬರ ಅಲಿ ಅವರ ಸಮಗ್ರ ಸಾಹಿತ್ಯ, ಸಂ. ದಸ್ತಗೀರ ಹುಲ್ಯಾಳ, ಪು.ಸಂ.೩೬೩